೮

"ದಲ್ಲಪ, ನಿಮ್ಮ ಬೀಗರನ್ನೂ ಇಲ್ಲಿಗೇ ಕರೆಸಿಕೊಳ್ಳೋಣ" ಎಂದು ತೈಲಪ ಮಹಾ ರಾಜ ಹೇಳಿದನು.

"ಪುನ್ನಮಯ್ಯ ಸತ್ತುದು ಅವರಿಗ ಮಾಯದ ಗಾಯವಾಗಿದೆ. ಅಣ್ಣ ತಮ್ಮಂದಿರು ವಾಸುದೇವ ಮತ್ತು ಬಲದೇವ ಇದ್ದಂತೆ ಅನ್ಯೋನ್ಯವಾಗಿದ್ದರು ಪ್ರಭು" ಎಂದು ದಲ್ಲಪ ಸಂಕಟದಿಂದ ನುಡಿದನು.

"ಪಾಪ ! ನಮ್ಮಿಂದಾಗಿ ಪೊನಮಯ್ಯ ಪ್ರಾಣ ನೀಗಿದನು. ಚಾಲುಕ್ಯ ಸಾಮ್ರಾಜ್ಯವನ್ನು ಭದ್ರವಾಗಿ ನೆಲೆಗೊಳಿಸುವುದಕ್ಕಾಗಿ ಎಷ್ಟೋಂದು ಜನ ಜಿನಧರ್ಮೀಯರು ಪ್ರಾಣತೆತ್ತರೋ ಏನೋ ! ಎಂದು ತೈಲಪ ನುಡಿದಾಗ ಒಂದೆರಡು ತೊಟ್ಟು ಕಂಬನಿ ಸುರಿಯದಿರಲಿಲ್ಲ.

"ರಾಷ್ಟ್ರಸೇವೆಗಿಂತ ಸೇವೆ ಯಾವುದಿದೆ ಪ್ರಭು ? ರಾಷ್ಟ್ರಕ್ಕಾಗಿ ಸತ್ತಾಗ ಅದೂ ಸಮಾಧಿಮರಣವಾಗುವುದು!"

"ಪೊನ್ನಮಯ್ಯನಿಲ್ಲದೇ ಹೋಗಿದ್ದರೆ ಅಂದಿನ ಸಂದರ್ಭದಲ್ಲಿ ಗೊಜ್ಜಿಗನಕೂಟ ಯುದ್ಧವನ್ನು ಎದುರಿಸಲು ಸಾಧ್ಯವಗುತ್ತಿರಲಿಲ್ಲ. ಪೊನಮಯ್ಯನ ಸೇವೆ ಚಿರಸ್ಮರಣೀಯವಾದುದು. ನಮ್ಮನ್ನು ಗುರಿಯಿಟ್ಟು ಗೊಜ್ಜರ, ಬಾಣತೂರಿದನು. ಪುನ್ನಮಯ್ಯ ಅರೆಚಣ ಎಚ್ಚರ ತಪ್ಪಿದ್ದರೆ ಅಂದು ನಮ್ಮ ಕತೆ ಪೂರೈಸುತ್ತಿತ್ತು ! ಮಹಾತ್ಮ ನನ್ನ ಪ್ರಾಣ ಉಳಿಸಿ ನನ್ನನು ಋಣಭಾರದಲ್ಲಿ ಬಿಟ್ಟುಹೋದನು. ಆತನಿಗೆ ಎಂಟು ಜನವೋ ಏನೋ ಮಕ್ಕಳಿವೆಯಂತೆ. ಒಮ್ಮೆ ಆತನೇ ಅಂದಹಾಗೇ ಜ್ಞಾಪಕ."

"ಅವನಿಗೆ ಮಕ್ಕಳೇ ಇಲ್ಲ ಸ್ವಾಮಿ. ಮಕ್ಕಳನ್ನೇ ತನ್ನ ಮಕ್ಕಳೆಂದು ಭಾವಿಸಿದ್ದನು !"

"ಮಕ್ಕಳೇ ಇಲ್ಲವೆ ! ಅಣ್ಣನ ಮೇಲೂ ಅಣ್ಣನ ಮಕ್ಕಳ ಮೇಲೂ ಅಷ್ಟೋಂದು ಮೋಹವೇ ?"

"ಹೌದು ಪ್ರಭು. ಆತನ ಹೆಂಡತಿ ಚಿತೆಯೇರುವಗ ತನ್ನ ಸ್ವಂತ ಆಸ್ತಿಯನ್ನು ಮೂರುಭಾಗ ಮಾಡಿ ಮಲ್ಲಪನ ಹೆಣ್ಣುಮಕ್ಕಳಲ್ಲಿ ಹಂಚಿ ಹೋದಳು. ನನ್ನ ಸೊಸೆಯರು ಹತ್ತಾರು ಬಂಡಿಯಲ್ಲಿ

ಚಿಕ್ಕಮ್ಮನ ಸೊತ್ತನ್ನು ಅಳುತ್ತ ಹೇರಿಕೊಂಡು ಬಂದರು. ಮಣಗಟ್ಟಲೆ ಬಂಗಾರ ತಂದಿರುವರು ! ಒಳ್ಳೆಯ ಮನೆತನ ಪ್ರಭು .ಆ ಮನೆಯಲ್ಲಿ ಹುಟ್ಟಿದವರೆಲ್ಲ ಕಲ್ಪತರುಗಳೇ !" ಎಂದು ದಲ್ಲಪ ಮೆಚ್ಚಿ ಕೊಂಡಾಡಿದನು.

"ದಲ್ಲಪ, ಇದುವರಿವಿಗೂ ನಾನು ಕಾಲ ಕಳೆದುದೇ ತಪ್ಪು. ಉಪಕಾರ ಸ್ಮರಣೆ ಬೇಡವೆ ? ಮೊದಲು ಮಲ್ಲಪನನ್ನು ಕರೆದು ತಂದು ಬಿಡಿ. ಸಚಿವ ಸಂಪುಟದಲ್ಲಿ ನೀವು ಪ್ರಧಾನಿಗಳು ಮಲ್ಲಪ ಉಪಪ್ರಧಾನಿ. ಪುಂಗನೂರಿನಿಂದ ಸಂಸಾರ ಸಮೇತ ಬಂದು ಬಿಡಲಿ,ನಮ್ಮ ವಿಜಯಪುರದಲ್ಲೇ ಅವರು ನೆಲಸಿಬಿಡಲಿ. ಬೇಕಿದ್ದರೆ ನಮ್ಮ ಬೇಸಿಗೆಯ ಅರಮನೆಯನ್ನೇ ಬಿಟ್ಟುಕೊಡೋಣ" ಎಂದು ತೈಲಪ ತೀರ್ಮಾನ ಕೈಗೊಂಡವನಂತೆ ಹೇಳಿದನು

"ಈಗ ನಾವು ದುಡುಕಬಾರದು ಪ್ರಭು .ರಾಜ್ಯದ ಪ್ರಮುಖ ಸ್ಥಾನಗಳಲ್ಲ ಜೈನರೇ ಆಕ್ರಮಿಸಿಕೊಂಡರೆಂದು ಉಳಿದವರು ಕರುಬಿಯಾರು !" ಎಂದು ದಲ್ಲಪ ವ್ಯವಹಾರವನ್ನು ತಿಳಿಸಿದನು.

"ದಲ್ಲಪ, ನಿಷ್ಠಾವಂತರು ಯಾವ ಜಾತಿಯವರಾದರೇನು ? ಚಾಲುಕ್ಯ ಸಾಮ್ರಾಜ್ಯದ ಶ್ರೇಯಸ್ಸಿಗಾಗಿ ಹೆಣಗಿ ದವರಲ್ಲಿ ಬಹುಜನ ಜೈನರು. ಶತಮಾನ ಶತಮಾನಗಳಿಂದಲೂ ಈ ಜನಾಂಗ ತ್ರಿಕರಣಪೂರ್ವಕ ನಮ್ಮ ವಂಶದ ಹಿತಚಿಂತನೆ ಮಾಡಿದೆ. ಪುಲಿಕೇಶಿಯ ಮಹಾಮಂತ್ರಿ ಸಮಂತ ಭದ್ರರು ಇಲ್ಲದೇ ಹೋಗಿದ್ದರೆ ಚಾಳುಕ್ಯ ಸಾಮ್ರಾಜ್ಯ ಹೇಳಹೆಸರಿಲ್ಲದಂತೆ ಆಗುತ್ತಿತೋ ಏನೊ. ಅಂದು ಮಂಗಳೇಶ ರಾಜ್ಯಲೋಭಕ್ಕೆ ಬಿದ್ದು ನಿಜವಾದ ಅಧಿಕಾರಿಯಾದ ಪುಲಿಕೇಶಿಗೆ ಪಂಗಲನಾಮ ಹಾಕಲು ಹೊಂಚಿದ್ದನು.ಇದರ ಮೇಲೆ ಪುಲಿಕೇಶಿಯ ತಮ್ಮ  ಮೂರ್ಖ ವಿಷ್ಣುವರ್ಧನ ತನ್ನ ತಿಳಿಗೇಡಿ ತನದಿಂದಾಗಿ ಪುಲಿಕೇಶಿಗೆ ಸದಾ ಕಿರುಕಳ ಕೊಡುತ್ತಿದ್ದನು. ಇಂಥ ಸಂದರ್ಭದಲ್ಲಿ ಸಮಂತಭದ್ರ ಕೈ ಹಿಡಿಯದೇ ಹೋಗಿದ್ದರೆ ಪುಲಿಕೇಶಿಗೆ ರಾಜನಾಗಲು ಸಾಧ್ಯವಿತ್ತೇ ? ಪುಲಿಕೇಶಿಯ ಎರಡು ಕಣ್ಣುಗಳಲ್ಲಿ ಒಂದು ಸಮಂತಭದ್ರನಾದರೆ ಇನ್ನೊಂದು ರವಿಕೀರ್ತಿ ! ಪುಲಿಕೇಶಿಯ ಕೀರ್ತಿಯನ್ನು ರವಿಕೀರ್ತಿ ಭರತಖಂಡದ ಎಲ್ಲೆಯನ್ನೂ ದಾಟುವಂತೆ ಮಾಡಿದನು. ಪರಿಷಿಯಾಕ್ಕೆ ತಾನೇ ಹೋಗಿ ರವಿಕೀರ್ತಿ ಚಾಲುಕ್ಯ ಸಾಮ್ರಾಜ್ಯದ ಕೀರ್ತಿಯನ್ನು ಹಬ್ಬಿ ಬಂದನು.

ಅನಿರೀಕ್ಷಿತವಾಗಿ ಬಾದಾಮಿಗೆ ಚೋಳಸೇನೆ ನುಗ್ಗಿದಾಗ ಪುಲಿಕೇಶಿಯನ್ನು ಉಳಿಸುವುದಕ್ಕಾಗಿ ಸಮಂತಭದ್ರನೂ ರವಿ ಕೀರ್ತಿಯೂ ಹೋರಾಡಿ ಸತ್ತರಲ್ಲ !ಇವರಿಬ್ಬರೂ ಜೈನರಲ್ಲವೇ ದಲ್ಲಪ? ಇಲ್ಲಿ ಜಾತಿ ಪ್ರಶ್ನೆಯೇ ಬರುದಿಲ್ಲ. ರಾಜಭಕ್ತರೆಂದು ನಿಮ್ಮನ್ನು ಬಳಿ ಸೇರಿಸಿಕೊಂಡಿರುವೆವೇ ಹೊರತು ಜೈನರೆಂದಲ್ಲವಲ್ಲ ! ಪಂಪ ಮಹಾಕವಿ ಅರಿಕೇಸರಿಗೆ ಬಲಗೈ ಆಗಿದ್ದರು. ಅರಿಕೇಸರಿಗೆ ಭಾವ ಮೈದುನನಾಗಿ, ಮಹಾರಾಣಿಯರಿಗೆ ಸೋದರನಾಗಿ, ಚಾಲುಕ್ಯ ಸಾಮ್ರಾಜ್ಯಕ್ಕೆ ಹಿತಚಿಂತಕನಾಗಿ ಪಂಪ ಮಹಾಕವಿ ಬಾಳಿದನು ! ಯೋಗ್ಯರು ಯಾವ ಜಾತಿಯವರಾದರೇನು ? ಎಷ್ಟು ಜನವಿದ್ದರೇನು ? ಅಂಥವರು ಹೆಚಿವಿದಷ್ಟೊ ರಾಜ್ಯಕ್ಕೆ ಕ್ಷೇಮವಲ್ಲವೆ ? ನೀವು ಅನುಮಾನ ಪಡದೆ ಸುಮ್ಮನೆ ಹೋಗಿ ಮಲ್ಲಪನನ್ನು ಕರೆದುಕೊಂಡು ಬನ್ನಿ” ಎಂದು ತೈಲಪ ಒತ್ತಾಯ ಮಾಡಿದನು.

“ನಾನೂ ಸಮಂತಭದ್ರನ ವಂಶದವನೇ ! ”ಎಂದು ದಲ್ಲಪ ಹೆಮ್ಮೆಯಿಂದ ನುಡಿದನು.

“ನಿಜವೇ ?”

“ ಅಹುದು ಪ್ರಭು ! ”

“ಸರಿಹೋಯಿತಲ್ಲ ! ನಾವು ಪುಲಿಕೇಶಿಯ ಮುಮ್ಮಗನ ಮುಮ್ಮಗನ ಮುಮ್ಮಗ ನೀವು ಸಮಂತಭದ್ರನ ಪೀಳಿಗೆಯವರೇ. ರವಿಕೀತಿಗೆ ಪುಲಿಕೇಶಿಯ ರಾಜ್ಯದಲ್ಲಿ ಯಾವ ಸ್ಥಾನಮಾನಗಳಿತ್ತೋ ಮಲ್ಲಪನಿಗೂ ಅದೇ ಸ್ಥಾನಮಾನ !” ಎಂದು ತೈಲಪ ಮನಸಾರೆ ನುಡಿದನು.

ಮಲ್ಲಪ ಪುಂಗನೂರನ್ನೂ ತೊರೆದು ಸಂಸಾರ ಸಮೇತ ಚಾಲುಕ್ಯ ಸಾಮ್ರಾಜ್ಯ ಅಂದಿನ ರಾಜಧಾನಿಯಾದ ವಿಜಯಪುರಕ್ಕೆ ಬಂದನು. ರಾಜಮರ್ಯಾದೆಯೊಡನೆ ಅವನನ್ನು ಸ್ವಾಗತಿಸಿದರು. ಉಪ ಪ್ರಧಾನಿಯನ್ನಾಗಿ ಮಾಡಿ ತೈಲಪ ಆತನನ್ನು ಗೌರವಿಸಿದನು. ಮಲ್ಲಪನ ಐದುಜನ ಗಂಡುಮಕ್ಕಳಿಗೂ ಅವರವರ ಅರ್ಹತಾನುಗಣುವಾಗಿ ಕಾರ್ಯವನ್ನು ಹಂಚಿದನು. ಚಾಲುಕ್ಯ ಸಾಮ್ರಾಜ್ಯದ ಕೀಲುಕೀಲುಗಳಲ್ಲೂ ಮಲ್ಲಪನೂ ಆತನ ಬೀಗರೂ ಕಾವಲು ಕುಳಿತಂತಾಯಿತು. !

ನೃಪಶಾಸ್ತ್ರಜ್ಞತೆಗಿಲ್ಲಿ ಮಲ್ಲಪನೊಳಶ್ವೇಭಾಗಮಕ್ಕಿಲ್ಲಿಮ<br>
ಲ್ಲಪನೊಳ್ ಶೂರತೆಗಿಲ್ಲಿ ಮಲ್ಲಪನೊಳಾರ್ತೀವೊಳ್ಸುಗಣಕ್ಕಿನ ಮ<br>
ಲ್ಲಪನೊಳ್ ಭವ್ಯತೆಗಿನಲ್ಲಿ ಮಲ್ಲಪನೊಳಾಚಾರಕ್ರಮಕ್ಕಿಲ್ಲಿ ಮ

ಲ್ಲಪನೊಳ್ ನೋಳ್ಪೊಡ ಕಾಣಲಾಗದು ಸಮಾನಂ ಮಾನವಾನೀಕಮಂ

ಪಂಡಿತಮಂಡಳಿಗಂ ಕವಿ
ಮಂಡಳಿಗಂ ತನ್ನ ಮನೆ ತವರ್ಮನೆಯೆನೆ ಕೆ
ಯ್ಕೊಂಡು ಪೊಗಳ್ದಪುದು ಭುವನಂ
ಕೌಂಡಿನ್ಯ ಕುಲಪ್ರದೀಪನಂ ಮಲ್ಲಪನಂ

ನೃಪಸಭೆಯೊಳ್ ನುಡಿದಂ ಮ
ಲ್ಲಪನ ಸತ್ಯಾಕ್ಷರಕ್ಕೆ ಗೆಂಟದರಿಂ ಮ
ಲ್ಲಪನ ಮತಮಂತು (ಟಾ) ದೇ
ಶಪೂರ್ವಕಂ ನುಡಿಯದಾತನುಂ ತದ್ವಿಧನೇ

ಅರಿವೆಡೆಯೊಳ್ ಕಾಲತ್ರಯ
ಮಿರಿವೆಡೆಯೊಳ್ ತನ್ನ ಶೌರ್ಯಮಂ ಬಲ್ಮೆಯುಮಂ
ಮೆರೆದಂ ಮಲ್ಲಪನಲ್ಲದೆ
ಪೆರೆನಾವನೊ ಶಾಸ್ತ್ರ ಶಸ್ತ್ರ ವಿದ್ಯಾಕುಶಲಂ